ಅರ್ಜುನ್ ಕುಮಾರ್ ಅವರ ನಿರ್ದೇಶನದಲ್ಲಿಯೇ 'ಫ್ಯಾಮಿಲಿ ಪ್ಯಾಕ್' ಎಂಬ ಇನ್ನೊಂದು ಸಿನಿಮಾ ಮಾಡುತ್ತಿದ್ದಾರೆ. ವಿಶೇಷವೆಂದರೆ ಈ ಚಿತ್ರವನ್ನು ಪಿಆರ್‌ಕೆ ಪ್ರೊಡಕ್ಷನ್ ಅಡಿಯಲ್ಲಿ ಪುನೀತ್ ರಾಜ್‌ಕುಮಾರ್ ನಿರ್ಮಾಣ ಮಾಡುತ್ತಿದ್ದಾರೆ.

'ಸಂಕಷ್ಟಕರ ಗಣಪತಿ' ಚಿತ್ರದ ಹಾಗೆ 'ಫ್ಯಾಮಿಲಿ ಪ್ಯಾಕ್' ಕೂಡ ಔಟ್ ಆ್ಯಂಡ್ ಔಟ್ ಕಾಮಿಡಿ ಚಿತ್ರ. 'ಸಂಕಷ್ಟಕರ ಗಣಪತಿ' ಚಿತ್ರದಲ್ಲಿ ಹೊಸ ರೀತಿಯ ಪರಿಕಲ್ಪನೆಯೊಂದನ್ನು ಪರಿಚಯಿಸಿದ್ದೆವು. ಅದು ಜನರಿಗೆ ಇಷ್ಟವಾಗಿತ್ತು. ಆ ಚಿತ್ರವನ್ನು ನೋಡಿದವರು ನಮ್ಮ ಹೊಸ ಸಿನಿಮಾದ ಬಗ್ಗೆಯೂ ನಿರೀಕ್ಷೆ ಇಟ್ಟುಕೊಂಡಿರುತ್ತಾರೆ. ಅವರ ನಿರೀಕ್ಷೆ ಹುಸಿಯಾಗದ ಹಾಗೆ 'ಫ್ಯಾಮಿಲಿ ಪ್ಯಾಕ್' ಚಿತ್ರದ ಕಥೆ ಸಿದ್ಧ ಮಾಡಿಕೊಂಡಿದ್ದೇವೆ' ಎಂದವರು ವಿಶ್ವಾಸದಿಂದ ನುಡಿಯುತ್ತಾರೆ.

'ಫ್ಯಾಮಿಲಿ ಪ್ಯಾಕ್' ಚಿತ್ರೀಕರಣ ಶುರುವಾಗಿಲ್ಲ. ಇಷ್ಟರಲ್ಲಿಯೇ ಚಿತ್ರೀಕರಣ ಆರಂಭಿಸುವ ಯೋಜನೆಯನ್ನು ತಂಡ ಹಾಕಿಕೊಂಡಿದೆ. ಬಹುಪಾಲು ಚಿತ್ರೀಕರಣ ಬೆಂಗಳೂರಿನಲ್ಲಿಯೇ ನಡೆಯಲಿದೆ.

ಪಿಆರ್‌ಕೆ ಪ್ರೊಡಕ್ಷನ್‌ನ ಎರಡು ಸಿನಿಮಾಗಳು ನೇರವಾಗಿ ಒಟಿಟಿಯಲ್ಲಿ ಬಿಡುಗಡೆಯಾಗುತ್ತಿವೆ. ಆ ಬ್ಯಾನರ್ ಅಡಿಯಲ್ಲಿಯೇ ನಿರ್ಮಾಣವಾಗುತ್ತಿರುವ 'ಫ್ಯಾಮಿಲಿ ಪ್ಯಾಕ್' ಸಿನಿಮಾ ಚಿತ್ರಮಂದಿರದಲ್ಲಿ ದರ್ಶನ ನೀಡುತ್ತದೆಯೇ? ಆನ್‌ಲೈನ್ ಪ್ಲ್ಯಾಟ್‌ಫಾರಂನಲ್ಲಿಯೇ ಬಿಡುಗಡೆಯಾಗುತ್ತದೆಯೇ ಎಂದು ಕೇಳಿದರೆ, 'ಅದು ನಿರ್ಮಾಪಕರಿಗೆ ಬಿಟ್ಟಿದ್ದು' ಎನ್ನುತ್ತಾರೆ ಲಿಖಿತ್. 'ಕೊರೊನಾ ಸಂಕಷ್ಟದ ಪರಿಸ್ಥಿತಿ ಮುಗಿದು ಚಿತ್ರಮಂದಿರದ ವ್ಯವಹಾರಗಳು ಮಾಮೂಲಿ ಹಂತಕ್ಕೆ ಮರಳಿದರೆ ಖಂಡಿತ ಚಿತ್ರಮಂದಿರಗಳಲ್ಲಿ ತೆರೆಕಂಡು ನಂತರ ಆನ್‌ಲೈನ್ ಪ್ಲ್ಯಾಟ್‌ಫಾರಂನಲ್ಲಿ ಬರುತ್ತದೆ. ಆದರೆ ಪರಿಸ್ಥಿತಿ ಈಗ ಇರುವಂತೆಯೇ ಇದ್ದರೆ ಒಟಿಟಿಯಲ್ಲಿಯೇ ನೇರ ಬಿಡುಗಡೆ ಮಾಡಬೇಕಾಗಿ ಬರಬಹುದು' ಎನ್ನುವುದು ಅವರ ಊಹೆ. 'ಆನ್‌ಲೈನ್ ಪ್ಲ್ಯಾಟ್‌ಫಾರಂ ಎನ್ನುವುದು ನಿರ್ಮಾಪಕರಿಗೆ ಸುರಕ್ಷಿತ ಮಾದರಿ' ಎಂದು ಹೇಳುವ ಅವರು, 'ಕನ್ನಡದಲ್ಲಿ ಒಟಿಟಿಯಲ್ಲಿ ನೇರವಾಗಿ ಬಿಡುಗಡೆ ಮಾಡಿದರೆ ಚಿತ್ರಮಂದಿರಗಳಲ್ಲಿ ಸಿನಿಮಾ ನೋಡುವಷ್ಟು ಜನರನ್ನು ತಲುಪಲು ಸಾಧ್ಯವಾಗುವುದಿಲ್ಲ' ಎಂಬುದನ್ನೂ ಒಪ್ಪಿಕೊಳ್ಳುತ್ತಾರೆ.

'ಸಂಕಷ್ಟಕರ ಗಣಪತಿ' ಮತ್ತು 'ಫ್ಯಾಮಿಲಿ ಪ್ಯಾಕ್' ಎರಡೂ ಹಾಸ್ಯಪ್ರಧಾನ ಚಿತ್ರಗಳು. ಆ ಜಾನರ್‌ಗೆ ನೀವು ಟ್ಯಾಗ್ ಆಗಿರುವಿರೇ ಎಂದು ಕೇಳಿದರೆ, 'ನನ್ನ ಮುಂದಿನ ಸಿನಿಮಾ ನಿಮ್ಮ ಪ್ರಶ್ನೆಗೆ ಉತ್ತರ ಕೊಡಲಿದೆ' ಎಂದು ನಗುತ್ತಾರೆ. ಕಥಾಪ್ರಧಾನ ಸಿನಿಮಾಗಳನ್ನೇ ಆಯ್ದು ನಟಿಸಬೇಕು ಎಂಬುದು ಅವರ ದೃಢ ಸಂಕಲ್ಪ. ಅಂದಹಾಗೆ, ಅವರು 'ಫ್ಯಾಮಿಲಿ ಪ್ಯಾಕ್' ನಂತರ ಒಂದು ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾದಲ್ಲಿ ನಟಿಸಲಿದ್ದಾರಂತೆ.

■

# ತಾರೆಯಾಗುವ ಮುನ್ನ ಆರಿ ಹೋದವರು

ಸುಶಾಂತ್ ಸಿಂಗ್ ರಜಪೂತ್ ಎಂಬ ಬಾಲಿವುಡ್‌ನ ಪ್ರತಿಭಾವಂತ ಯುವತಾರೆಯ ಆತ್ಮಹತ್ಯೆ ಸಾಕಷ್ಟು ಚರ್ಚೆಗೆ ಗ್ರಾಸವಾಯ್ತು. ಬಾಲಿವುಡ್ ಎಂಬ ದಂತಗೋಪುರದ ಒಳಗಿನ ಕರಾಳ ನೆರಳುಗಳ ಪರಿಚಯವನ್ನೂ ಮಾಡಿಸಿತು. ಹಾಗಿದ್ದೂ ಸಾವಿರ ಸಾವಿರ ಜನರಿಗೆ ತನ್ನ ಸಿನಿಮಾ ಮೂಲಕ ಬದುಕಿಗೆ ಪ್ರೇರಣೆ ಒದಗಿಸಿದ್ದ ಪ್ರತಿಭಾವಂತನೊಬ್ಬ ತನ್ನನ್ನು ತಾನು ಕೊಂದುಕೊಳ್ಳುವ ಮಟ್ಟಕ್ಕೆ ಇಳಿಯಲು ಹೇಗೆ ಸಾಧ್ಯವಾಯ್ತು ಎಂಬ ಪ್ರಶ್ನೆಯೊಂದು ಸರಿತಪ್ಪುಗಳ ಕಪ್ಪು ಬಿಳುಪು ಪಟ್ಟಿಯ ಆಚಿನ ಜಾಗದಲ್ಲಿಯೇ ನಿಂತು ಇಂದಿಗೂ ಕಾಡುತ್ತಿದೆ.



ಸುಶೀಲ್ ಕುಮಾರ್

ಈ ಆತ್ಮಹತ್ಯೆಯ ಕರಾಳ ನೆರಳು ಕನ್ನಡ ಚಿತ್ರರಂಗವನ್ನೂ ಬಿಟ್ಟಿಲ್ಲ. ಕೆಲವೇ ದಿನಗಳಲ್ಲಿ ಕನ್ನಡ ಚಿತ್ರರಂಗದ ಇಬ್ಬರು ಯುವಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರು ಸ್ಟಾರ್ ನಟರಲ್ಲ, ವರ್ಚಸ್ವಿ ನಿರ್ದೇಶಕರಲ್ಲ, ಪ್ರಭಾವಿ ನಿರ್ಮಾಪಕರಲ್ಲ... ಹಾಗಾಗಿ ಸಾಮಾಜಿಕ ಜಾಲತಾಣಗಳಲ್ಲಿ ಕೆಲವರ ಶ್ರದ್ಧಾಂಜಲಿಯೊಂದಿಗೆ ಮುಗಿದುಹೋಗಿದೆ. ಆದರೆ ತಾರಾಜಗತ್ತಿನಲ್ಲಿ ನೆಲೆಯೂರಿ ತಲೆಯೆತ್ತಿ ಬೆಳೆಯಬೇಕು ಎಂದು ಕನಸಿನ ಚುಂಗು ಹಿಡಿದು ಬಂದವರು ಅವರು. ಸಾಮಾನ್ಯನೊಬ್ಬ ಬಣ್ಣದ ಲೋಕವನ್ನು ಬದುಕಿನ ದಾರಿಯಾಗಿಸಿಕೊಳ್ಳುವುದೆಂದರೆ ಅದು ಸರಳ ಸಂಗತಿ ಖಂಡಿತ ಅಲ್ಲ. ಅದೊಂದು ದೊಡ್ಡ ಯಂತ್ರ. ನುರಿದು, ಉರಿದು, ನೊಂದು ಬೆಂದು ಮುಂದೆ ಸಾಗುವ ಛಾತಿಯನ್ನು ಅದು ಬೇಡುತ್ತದೆ. ಈ ಇಬ್ಬರು ಯುವಕರೂ ಅದೇ ದಾರಿಯನ್ನು ಆಯ್ದುಕೊಂಡು ಸಾಕಷ್ಟು ದೂರ ನಡೆದವರು.



ಲೋಕೇಶ್

ನಾಗಮಂಗಲ ಮೂಲದ ಲೋಕೇಶ್, 'ಬೆಲ್ ಬಾಟಂ', 'ಅವನೇ ಶ್ರೀಮನ್ನಾರಾಯಣ'ದಂಥ ಸೂಪರ್ ಹಿಟ್ ಸಿನಿಮಾಗಳಿಗೆ ಕಲಾ ನಿರ್ದೇಶಕನಾಗಿ ಕೆಲಸ ಮಾಡಿದ್ದವರು. 'ಬೆಲ್ ಬಾಟಂ 2', 'ಬನಾರಸ್' ಸಿನಿಮಾಗಳಿಗೂ ಅವರು ಕಲಾ ನಿರ್ದೇಶಕರಾಗಿ ಕೆಲಸ ಮಾಡುವ ಹೊಣೆ ಹೊತ್ತಿದ್ದವರು. ಆದರೆ ಕೋವಿಡ್ ಕಾರಣಕ್ಕೆ ಕಳೆದ ಮೂರು ತಿಂಗಳಿಂದ ಕೆಲಸವಿಲ್ಲದೆ ಮನೆಯಲ್ಲಿಯೇ ಇದ್ದರು. ಆರ್ಥಿಕ ಸಂಕಷ್ಟ, ಖಿನ್ನತೆಯಿಂದ ಅವರು ಆತ್ಮಹತ್ಯೆ ಮಾಡಿಕೊಂಡರು ಎಂಬುದು ಮೇಲ್ನೋಟಕ್ಕೆ ಸಿಗುವ ಕಾರಣ. ಆದರೆ ಅವರ ಶ್ವಾಸಕೋಶಗಳಲ್ಲಿ ಅದ್ಯಾವ ದುಗುಡ ತುಂಬಿಕೊಂಡಿತ್ತೋ ಬಲ್ಲವರಾರು?

ಇನ್ನೊಬ್ಬ ಹುಡುಗ ಮಂಡ್ಯದ ಸುಶೀಲ್ ಕುಮಾರ್. ದುನಿಯಾ ವಿಜಯ್ ಅವರ 'ಸಲಗ' ಸಿನಿಮಾದಲ್ಲಿ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ನಟಿಸಿದ್ದ ಆ ಹುಡುಗ ತನ್ನ ಪ್ರತಿಭೆಯಿಂದಲೂ ಸ್ನೇಹಗುಣದಿಂದಲೂ ಮೆಚ್ಚುಗೆ ಗಳಿಸಿದ್ದ. ಮೂವತ್ತರ ಆಸುಪಾಸಿನ ಈ ತರುಣ ನಟನೂ ಆತ್ಮಹತ್ಯೆಗೆ (ಜುಲೈ 8ರಂದು) ಶರಣಾಗಿದ್ದಾನೆ.

ಬಣ್ಣದ ಲೋಕದ ಕನಸಿನ ಬೆನ್ನತ್ತಿದವರು ಮುಳ್ಳಿನ ಹಾದಿಯಲ್ಲಿಯೇ ಸಾಗಬೇಕು. ಆ ಹಾದಿಯ ತುದಿಯಲ್ಲಿಯೇ ತಾರೆಗಳ ಮಿನುಗುಲೋಕವಿದೆ ಎಂಬ ನಂಬಿಕೆಯೇ ಅವರ ನೋವ ಮರೆಸುವ ಮುಲಾಮು. ಮುಳ್ಳಿನ ಹಾದಿಯಲ್ಲಿಯೇ ನಡೆಯುತ್ತಿದ್ದವರ ಕಣ್ಣಲ್ಲಿನ ತಾರಾಕನಸನ್ನು ಮರೆಸಿ, ಜೀವ ತೆಗೆದುಕೊಳ್ಳುವ ಖಳದುಃಸ್ವಪ್ನವನ್ನು ತುಂಬಿದ್ದು ಯಾರು? ಅದ್ಯಾವ ವಿಷಗಳಿಗೆಯಲ್ಲಿ ಅವರು ಈ ಲೋಕದಾಚೆ ತಮ್ಮೆಲ್ಲ ಸಮಸ್ಯೆಗಳಿಗೆ ಪರಿಹಾರ ಸಿಗಬಹುದು ಎಂದೆಣಿಸಿದರು? ನೂರು ಸಾವಿರ ಜನರಿಗೆ ಮಾದರಿಯಾಗುವ ನಿಟ್ಟಿನಲ್ಲಿ ಹೆಜ್ಜೆ ಇಡಬೇಕಾಗಿದ್ದ ಅವರ ಬಲಿಷ್ಠ ತೋಳುಗಳು ಸೋತಿದ್ದೆಲ್ಲಿ?

ಪ್ರಶ್ನೆಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಉತ್ತರ ಸುಲಭಕ್ಕಂತೂ ಸಿಗುವುದಿಲ್ಲ. ತೆರೆಯ ಮೇಲೆ ಮಿನುಗುವ ಕನಸು ಕಂಡ ಕನಸುಗಳು ಬದುಕಿನ ವಾಸ್ತವಕ್ಕೆ ಮುಖಾಮುಖಿಯಾಗುವಾಗ ಎಡವಿದರೆ ರೀಟೇಕ್ ಇರುವುದಿಲ್ಲ ಎಂಬ ಸಂಗತಿ ಸಾವಿಗೆ ಮುತ್ತಿಡಲು ಹೊರಟವರಿಗೆ ಅರಿವಾಗಲಿ. ತಾರೆಯಾಗುವ ಕನಸು ಕಂಡವರು ಬದುಕಿಗೆ ಮೋಸವೆಸಗಿ ಆರಿಹೋದರೆ ಅವರನ್ನು ಒಪ್ಪುವುದು ಹೇಗೆ? ■